2) 2004ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಶುಲ್ಕಗಳು) ವಿನಿಯಮಗಳ ಕಂಡಿಕೆ 5 ಅನ್ನು ತಿದ್ದುಪಡಿ ಮಾಡಿ ದಿನಾಂಕ:30.08. 2013 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಕವಿನಿಆ/ವಿನಿಯಮಗಳು/ಕ–40/ ಸಂಪುಟ–06, ಅನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

4 ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ.ಎನ್.ರಾಜಣ್ಣ (ಮಧುಗಿರಿ) : ಅಧ್ಯಕ್ಷರೆ, ಮಧುಗಿರಿ ತಾಲ್ಲೂಕು ಕೊಟಗಾರ್ಲಹಳ್ಳಿ ಗ್ರಾಮಕ್ಕೆ ಪಶುಆಸ್ಪತ್ರೆ ಮಂಜೂರಾತಿ ಮಾಡುವಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. **ವಿಷಯ:** ಚಿಂತಾಮಣಿ ತಾಲ್ಲೂಕಿನಲ್ಲಿ ಬಹಳಷ್ಟು ಒತ್ತುವರಿಯಾಗಿರುವ ಬಗ್ಗೆ

ಶ್ರೀ ಎಂ.ಕೃಷ್ಣಾರೆಡ್ಡಿ (ಚಿಂತಾಮಣಿ): ಕಳೆದ 6 ತಿಂಗಳ ಹಿಂದೆ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಒತ್ತುವರಿಯನ್ನು ಯಾರು ಯಾರು ಮಾಡಿದ್ದಾರೆ. ಆ ಒತ್ತುವರಿಯನ್ನು ತೆರವುಗೊಳಿಸಿ ತಂತಿಬೇಲಿಯನ್ನು ಹಾಕಿಸಿ ಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಕಂದಾಯ ಸಚಿವರು ಇದ್ದಾರಾ?ಉತ್ತರ ಇದೆಯೇ?

ಶ್ರೀ ಜಯಚಂದ್ರ (ಕಾನೂನು ಮತ್ತು ಸಂಸದೀಯ,ಪಶು ಸಂಗೋಪನೆ, ಮಾನವ ಹಕ್ಕುಗಳ ಸಚಿವರು): ಮಾನ್ಯ ಕೃಷ್ಣಾರೆಡ್ಡಿಯವರ ಪಶ್ನೆಗೆ ಕಂದಾಯ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

2, **ವಿಷಯ : ಸರ್ಕಾರದ ವತಿಯಿಂದ ಮೆಕ್ಕೆ ಜೋಳ ಖರೀದಿ ಮಾಡುವ ಬಗ್ಗೆ**

ಶ್ರೀ ಎನ್.ಹೆಚ್.ಕೋನರೆಡ್ಡಿ(ನವಲಗುಂದ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈಗಾಗಲೇ ಮೆಕ್ಕೆಜೋಳ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದಾರೆ.25 ಕ್ವಿಂಟಾಲ್ ಖರೀದಿ ಮಿತಿ ಇದ್ದಿದ್ದನ್ನು ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಬದಲಾವಣೆ ಮಾಡಿ ರೈತರು ಬೆಳೆದಂಥ ಮೆಕ್ಕೆಜೋಳ ಬೆಳೆಯನ್ನು ಪೂರ್ತಿ ಖರೀದಿ ಮಾಡಬೇಕೆಂದು ನಿರ್ಧಾರ ಮಾಡಲಾಯಿತು ಮತ್ತು ಅದನ್ನು 75 ಕ್ವಿಂಟಾಲ್ ಮಿತಿ ಎಂದು ಮಾಡಿದರು. ಹಾಗಾಗಿ ಬೆಳೆಯನ್ನು ಸಂಪೂರ್ಣ ವಾಗಿ ಖರೀದಿ ಮಾಡಬೇಕೆಂದು ಒಂದು ನಿರ್ಣಯವಾಗಿತ್ತು. ಖರೀದಿ ಕೇಂದ್ರಗಳನ್ನು ತೆರೆಯುವುದಕ್ಕೆ ಅಧಿಕಾರಿಗಳೇ ಇಲ್ಲವೆಂದು ಹೇಳುತ್ತಾರೆ, ಖರೀದಿ ಮಾಡಿದಂಥ Transport Contractor ಗೆ ಮೊದಲು 80% ಕೊಡುತ್ತಿದ್ದರು. ಈಗ 40% ಕೊಡುತ್ತಿರುವುದಕ್ಕೆ ಅವರು transport ಅನ್ನು ಬೇಗ ಬೇಗ ಮಾಡುತ್ತಿಲ್ಲ. ಈ ಎಲ್ಲ ಸಮಸ್ಯೆಗಳಿಗೆ ತಕ್ಷಣ ಪರಿಹಾರವನ್ನು ಕೊಡುವ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಬೇಕು.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ,ಪಶು ಸಂಗೋಪನಾ, ಮಾನವ ಹಕ್ಕುಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರ್ಕಾರ ತೀರ್ಮಾನ ಮಾಡಿದೆ. 75 ಅಥವಾ 100 ಕ್ವಿಂಟಾಲ್ ಎಂದು ಮಿತಿ ಏನಿತ್ತು ಅದನ್ನು relax ಮಾಡಿ ನೇರವಾಗಿ ರೈತರಿಂದ ಬರತಕ್ಕಂಥದ್ದನ್ನು ಕೊಂಡುಕೊಳ್ಳಬೇಕೆಂದು ಸ್ಪಷ್ಟ ಸೂಚನೆ ಕೊಟ್ಟಿದ್ದೇವೆ ಮತ್ತು ನೇರವಾಗಿ ರೈತರಿಂದ ಕೊಳ್ಳಬೇಕಾದಂಥ ಸಂದರ್ಭದಲ್ಲಿ ಅಗತ್ಯ ಬಿದ್ದರೆ ಕೇಂದ್ರಗಳನ್ನು ಕೂಡ ವರ್ಗಾವಣೆ ಮಾಡಿ ಹಳ್ಳಿ ಪ್ರದೇಶಗಳಿಂದ procurement ಮಾಡಬೇಕು